ಕೊಂಚಾವರಂ ಭಾಗದ ಅರಣ್ಯ ಪ್ರದೇಶ

2058(2621); ಡಾ॥ ಉಮೇಶ್ ಜಿ. ಜಾದವ್ (ಚಿಂಚೋಳಿ)

ಅ) ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಭಾಗದ ಅರಣ್ಯ ಪ್ರದೇಶವನ್ನು ಗಡಿ ಭಾಗದ ನೆರೆ ರಾಜ್ಯದವರು ಒತ್ತುವರಿ ಮಾಡಿ ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರಹದ್ದು ಸಮೀಕ್ಷೆ ಮಾಡಿ, ಸದರಿ ಅರಣ್ಯ ಪ್ರದೇಶ ಒತ್ತುವರಿ ಯಾಗಿರುವುದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕುಂಚಾವರಂ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಗ್ರಾಮಗಳಾದ ಸಂಗಾಪುರ, ಕೆ. ಸಂಗಾಪುರ, ಮಕ್ದಂಪೂರ ಗ್ರಾಮಗಳು ಆಂಧ್ರ ಪ್ರದೇಶದ ಗಡಿಗೆ ಹೊಂದಿಕೊಂಡಿದ್ದು ಅಲ್ಲಿ ಅತಿ ಕ್ರಮಣವಾಗುತ್ತಿದ್ದು ಅದನ್ನು ತಡೆಗಟ್ಟಲು ಸರಹದ್ದು ಪಹರೆ (ಗಸ್ತು) ಮಾಡಲಾಗುತ್ತಿದೆ. ಮತ್ತು ಕಾನೂನಿನಂತೆ ಅತಿಕ್ರಮಣದಾರರ ಮೇಲೆ ಕ್ರಮ ಜರುಗಿಸಲಾಗುವುದು.